# All India Radio: Bangalore
# National Bulletin In Kannada
# 08.06.2025 / 19.35pm

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**<><*<><>*><>**

ಮುಖ್ಯಾಂಶಗಳು

೧. ಒಂದು ರಾಷ್ಟ್ರ ಒಂದು ಚುನಾವಣೆ ಉಪಕ್ರಮವನ್ನು ಜನಾಂದೋಲನವಾಗಿಸಲು ಕರೆ ನೀಡಿದ ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್

೨. ಜಾಗತಿಕವಾಗಿ ಭಾರತದ ಧ್ವನಿಯನ್ನು ಪಸರಿಸುತ್ತಿರುವ ಆಕಾಶವಾಣಿಗೆ ಇಂದಿಗೆ ೯೦ ವರ್ಷ

೩. ಅಸ್ಸಾಂನಲ್ಲಿ ಪ್ರವಾಹ ಪರಿಸ್ಥಿತಿ ಸುಧಾರಣೆ: ೧೩೦ ಪರಿಹಾರ ಶಿಬಿರಗಳಲ್ಲಿ ೩೦ ಸಾವಿರಕ್ಕೂ ಹೆಚ್ಚು ಜನರಿಗೆ ಆಶ್ರಯ

೪. ಫ್ರೆಂಚ್ ಓಪನ್ ಟೆನ್ನಿಸ್; ಮಹಿಳಾ ಡಬಲ್ಸ್ ಪ್ರಶಸ್ತಿ ಮುಡಿಗೇರಿಸಿಕೊಂಡ ಇಟಲಿಯ ಸಾರಾ ಎರ್ರಾನಿ - ಜಾಸ್ಮಿನ್ ಪಾವೋಲಿನಿ ಜೋಡಿ

**<><*<><>*><>**

ಒಂದು ರಾಷ್ಟ್ರ ಒಂದು ಚುನಾವಣೆ ಒಂದು ಜನಾಂದೋಲನವಾಗಬೇಕು ಎಂದು ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್, ಹೇಳಿದ್ದಾರೆ.

ಬೆಂಗಳೂರಿನ ರಾಜಭವನ ರಸ್ತೆಯಲ್ಲಿರುವ ಖಾಸಗಿ ಹೋಟೆಲ್‌ನಲ್ಲಿಂದು ಸಾಮಾಜಿಕ ಮಾಧ್ಯಮ ಪ್ರಭಾವಿಗಳು ಮತ್ತು ಚಿಂತಕರನ್ನು ಉದ್ದೇಶಿಸಿ ರಾಷ್ಟ್ರದ ಅಭಿವೃದ್ಧಿಯಲ್ಲಿ ಒಂದು ರಾಷ್ಟ್ರ ಒಂದು ಚುನಾವಣೆ ಉಪಕ್ರಮದ ಮಹತ್ವದ ಕುರಿತು ಮಾತನಾಡಿದ ಅವರು, ವರ್ಷದ ಪ್ರತಿ 6 ತಿಂಗಳಿಗೊಮ್ಮೆ ಚುನಾವಣೆ ನಡೆಯುತ್ತಿದ್ದು, ಇದರಿಂದಾಗಿ ರಾಷ್ಟ್ರಕ್ಕೆ ಸಮಯದ ಜೊತೆಗೆ ಆರ್ಥಿಕ ನಷ್ಟವಾಗುತ್ತಿದೆ. 5 ವರ್ಷಗಳಿಗೊಮ್ಮೆ ಲೋಕಸಭೆ ಹಾಗೂ ವಿಧಾನಸಭೆ ಚುನಾವಣೆಗಳನ್ನು ಏಕಕಾಲಕ್ಕೆ ನಡೆಸಿದ್ದಲ್ಲಿ ಆಡಳಿತದ ಸಮಯ ಹಾಗೂ ಹಣ ಉಳಿತಾಯವಾಗಲಿದೆ. ಚುನಾವಣೆ ಸಮಯದಲ್ಲಿ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವಾಗ ಯಾವುದೇ ದೀರ್ಘಕಾಲಿನ ತೀರ್ಮಾನಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಅದ್ದರಿಂದ ಜನಪ್ರತಿನಿಧಿಗಳು ಚುನಾವಣೆ ಹೊರತುಪಡಿಸಿ ಬಾಕಿ ಸಮಯವನ್ನು ದೇಶದ ಅಭಿವೃದ್ಧಿಗೆ ಹಾಗೂ ಜನರ ಕಲ್ಯಾಣಕ್ಕೆ ಮೀಡಲಿಡಬಹುದು ಎಂದರು. ಈ ಹಿನ್ನೆಲೆ, ಈ ಉಪಕ್ರಮವನ್ನು ಒಂದು ಜನಾಂದೋಲನ ರೂಪದಲ್ಲಿ ಮುನ್ನೆಡೆಸಿ ಯಶಸ್ವಿಯಾಗಿ ಅನುಷ್ಠಾನಗೊಳಿಸಬೇಕು ಎಂದು ಸಾಮಾಜಿಕ ಮಾಧ್ಯಮ ಪ್ರಭಾವಿಗಳು ಹಾಗೂ ಚಿಂತಕರಿಗೆ ಸಚಿವರು ಕರೆ ನೀಡಿದರು. ಇದೇ ವೇಳೆ, ದೇಶದ ಕೃಷಿ ವಲಯದ ಅಭಿವೃದ್ಧಿಗೆ ಸಂಬಂಧಿಸಿದಂತೆ ಮಾತನಾಡಿದ ಸಚಿವರು ಪ್ರಯೋಗಾಲಯಗಳಲ್ಲಿ ಕೆಲಸ ಮಾಡುವ ವಿಜ್ಞಾನಿಗಳು ಹಾಗೂ ಹೊಲಗಳಲ್ಲಿ ಕೆಲಸ ಮಾಡುವ ರೈತರ ನಡುವೆ ಸಂಪರ್ಕ ಕಲ್ಪಿಸಲು ವಿಕಸಿತ ಕೃಷಿ ಸಂಕಲ್ಪ ಅಭಿಯಾನವನ್ನು ನಡೆಸಲಾಗುತ್ತಿದೆ. 4ನೇ ತ್ರೈಮಾಸಿಕದಲ್ಲಿ ಭಾರತದ ಕೃಷಿ ಬೆಳವಣಿಗೆ ದರ 5.4ರಲ್ಲಿದೆ. ಗೋಧಿ ಮತ್ತು ಅಕ್ಕಿಯ ಉತ್ಪಾದನಾ ಪ್ರಮಾಣ ಸಾರ್ವಕಾಲಿಕ

ಉತ್ತಮವಾಗಿದೆ. 2014ರ ಬಳಿಕ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಆಹಾರ ಉತ್ಪಾದನಾ ಪ್ರಮಾಣ ಶೇಕಡ 40ರಷ್ಟು ಹೆಚ್ಚಾಗಿದೆ ಎಂದು ಸಚಿವರು ಮಾಹಿತಿ ನೀಡಿದರು.

**<><*<><>*><>**

ಆಕಾಶವಾಣಿಗಿಂದು 90 ವರ್ಷ. 1936 ಜೂನ್ 8 ರಂದು ರಾಜ್ಯ ಪ್ರಸಾರ ಸೇವೆಯನ್ನು ಆಲ್ ಇಂಡಿಯಾ ರೇಡಿಯೋ ಎಂದು ಮರುನಾಮಕರಣ ಮಾಡಲಾಯಿತು. ಈ ಮಹತ್ವದ ದಿನವು ದೇಶದ ಕಲೆ, ಸಾಹಿತ್ಯ, ಸಾಂಸ್ಕೃತಿಕ, ಮಾಹಿತಿ ಮತ್ತು ಪ್ರಸಾರ ಇತಿಹಾಸದಲ್ಲಿ ಒಂದು ವಿಶೇಷ ಕ್ಷಣವನ್ನು ಗುರುತಿಸುತ್ತದೆ. ಸ್ವಾತಂತ್ರ್ಯ ನಂತರ ಆಲ್ ಇಂಡಿಯಾ ರೇಡಿಯೋ ವೇಗವಾಗಿ ದೇಶಾದ್ಯಂತ ವಿಸ್ತರಿಸಿ, 1956 ರಲ್ಲಿ 'ಆಕಾಶವಾಣಿ' ಎಂಬ ಹೆಸರು ಪಡೆಯಿತು. ಇಂದು, ಆಕಾಶವಾಣಿ 591 ಕೇಂದ್ರಗಳನ್ನು ನಿರ್ವಹಿಸುತ್ತಿದ್ದು, ಭಾರತದ ಜನಸಂಖ್ಯೆಯ 98 ಪ್ರತಿಶತವನ್ನು ತಲುಪಿದೆ. 23 ಭಾಷೆಗಳು ಮತ್ತು 146 ಉಪಭಾಷೆಗಳಲ್ಲಿ ಪ್ರಸಾರ ಸೇವೆ ಇದೆ. ಆಕಾಶವಾಣಿಯ ಬಾಹ್ಯ ಸೇವೆಗಳ ವಿಭಾಗವು 100 ಕ್ಕೂ ಹೆಚ್ಚು ದೇಶಗಳಿಗೆ ಪ್ರಸಾರ ಮಾಡುತ್ತದೆ. ಜಾಗತಿಕವಾಗಿ ಭಾರತದ ಧ್ವನಿಯನ್ನು ಪಸರಿಸುತ್ತಾ, 'ಬಹುಜನ ಹಿತಾಯ, ಬಹುಜನ ಸುಖಾಯ' ಎಂಬ ತನ್ನ ಉದಾತ್ತ ಆದರ್ಶಗಳಿಗೆ ಅನುಗುಣವಾಗಿ ಆಕಾಶವಾಣಿ ಸುದ್ದಿ ಸೇವೆಗಳ ವಿಭಾಗ ದೇಶದ ಪ್ರತಿಯೊಬ್ಬ ನಿವಾಸಿಗೂ ವಿವಿಧ ಭೂಪ್ರದೇಶಗಳಲ್ಲಿ ಎಲ್ಲಾ ಪ್ರಮುಖ ಭಾಷೆಗಳು ಮತ್ತು ಉಪಭಾಷೆಗಳಲ್ಲಿ ಸುದ್ದಿಯನ್ನು ನೀಡುತ್ತಿದೆ.

**<><*<><>*><>**

ಎನ್‌ಡಿಎ ಸರ್ಕಾರ 11 ವರ್ಷಗಳನ್ನು ಪೂರೈಸುವ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ವಿಕಸಿತ ಭಾರತ ಹಾದಿಯಲ್ಲಿ ನಾರಿಯರು ತೋರಿರುವ ಪರಿವರ್ತನಾತ್ಮಕ ಪಾತ್ರದ ಕುರಿತು ಒತ್ತಿ ಹೇಳಿದ್ದಾರೆ. ವಿಜ್ಞಾನ, ಶಿಕ್ಷಣ, ಕ್ರೀಡೆ, ನವೋದ್ಯಮ ಹಾಗೂ ಶಸ್ತ್ರಸ್ತ್ರ ಪಡೆಗಳು ಸೇರಿದಂತೆ ಎಲ್ಲಾ ಕ್ಷೇತ್ರದಲ್ಲಿ ಮಹಿಳೆಯರು ಸಾಧನೆ ಮಾಡುತ್ತಿದ್ದು, ಹಲವರಿಗೆ ಸ್ಪೂರ್ತಿದಾಯಕರಾಗಿದ್ದಾರೆ ಎಂದು ಸಾಮಾಜಿಕ ಮಾಧ್ಯಮದಲ್ಲಿ ಪ್ರಧಾನಿ ತಿಳಿಸಿದ್ದಾರೆ.

**<><*<><>*><>**

ಕಳೆದ ಒಂದು ದಶಕದಲ್ಲಿ ಭಾರತ ಸರ್ವತೋಮುಖವಾಗಿ ಗಮನಾರ್ಹ ಬದಲಾವಣೆಯನ್ನು ಕಂಡಿದ್ದು, ಸೇವೆ, ಸುಶಾಸನ ಮತ್ತು ಬಡವರ ಕಲ್ಯಾಣದ ತತ್ವದಡಿ ಮುನ್ನಡೆಯುತ್ತಿದೆ. ಕೇಂದ್ರ ಸರ್ಕಾರ ಕಳೆದ 11 ವರ್ಷಗಳಲ್ಲಿ ಕೈಗೊಂಡಿರುವ ಹಲವು ಪ್ರಮುಖ ಪ್ರಯತ್ನಗಳ ಕುರಿತು ಆಕಾಶವಾಣಿ ಸುದ್ದಿ ವಿಭಾಗ ವಿಶೇಷ ವರದಿಯನ್ನು ಪ್ರಸಾರ ಮಾಡುತ್ತಿದೆ. ಈ ಮಾಲಿಕೆಯಲ್ಲಿ ಇಂದು, ನಾರಿ ಶಕ್ತಿ – ಸಾಮಾಜಿಕ ಪರಿವರ್ತನೆ ಮತ್ತು ಒಳಗೊಳ್ಳುವಿಕೆಯೆಡೆಗಿನ ಒಂದು ಪಯಣ ಎಂಬುದರ ಕುರಿತ ವರದಿ ಇಲ್ಲಿದೆ.

**ವರದಿ:**

ಕೇಂದ್ರ ಸರ್ಕಾರ ಮಹಿಳಾ ಸಬಲೀಕರಣವನ್ನು ಕೇವಲ ಅಭಿವೃದ್ಧಿ ಚಟುವಟಿಕೆಯಾಗಿ ಮಾತ್ರವಲ್ಲದೇ, ಅದನ್ನು ಸಮಾವೇಶಿ, ಗೌರವ ಮತ್ತು ಸಮಾನ ಅವಕಾಶಗಳ ಹಕ್ಕಾಗಿ ಪರಿಗಣಿಸಿದೆ. ಪೋಷಣ್ ಅಭಿಯಾನ ಮತ್ತು ಮಿಷನ್ ಪೋಷಣ್ 2.0 ಮುಖಾಂತರ ಮಕ್ಕಳಿಂದ ಪ್ರಾರಂಭಿಸಿ ತಾಯಂದಿರವರೆಗೆ ಪೌಷ್ಟಿಕ ಆಹಾರಕ್ಕೆ ಒತ್ತು ನೀಡಲಾಗಿದೆ. ಎರಡು ಲಕ್ಷಕ್ಕೂ ಹೆಚ್ಚು ಅಂಗನವಾಡಿ ಕೇಂದ್ರಗಳನ್ನು ಪೌಷ್ಟಿಕತೆ ಜೊತೆಗೆ ಪ್ರಾಥಮಿಕ ಶಿಕ್ಷಣ ಕೇಂದ್ರಗಳಾಗಿ ಅಭಿವೃದ್ಧಿಪಡಿಸಲಾಗಿದೆ. ಜನನಿ ಶಿಶು ಸುರಕ್ಷಾ ಕಾರ್ಯಕ್ರಮ ಮತ್ತು ಜನನಿ ಸುರಕ್ಷಾ ಯೋಜನೆಗಳಿಂದ ಲಕ್ಷಾಂತರ ಮಹಿಳೆಯರು ಸುರಕ್ಷಿತ ಪ್ರಸವ ಹಾಗೂ ಆರೋಗ್ಯ ಸೇವೆಗಳ ಲಾಭ ಪಡೆದಿದ್ದಾರೆ. ಮಹಿಳೆಯರ ಗೌರವ ಮತ್ತು ಸುರಕ್ಷತೆಗೆ ಕಾರಣವಾದ ಸ್ವಚ್ಛ ಭಾರತ ಮಿಷನ್ ಅಡಿಯಲ್ಲಿ 12 ಕೋಟಿಗೂ ಹೆಚ್ಚು ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಉಜ್ವಲ ಯೋಜನೆ 10 ಕೋಟಿಗೂ ಹೆಚ್ಚು ಎಲ್‌ಪಿಜಿ ಸಂಪರ್ಕಗಳನ್ನು ಒದಗಿಸಿದ್ದು, ಹೊಗೆ ಮುಕ್ತ ವಾತಾವರಣವನ್ನು ಸೃಷ್ಟಿಸಿದೆ. ಜಲ ಜೀವನ್ ಮಿಷನ್ ಅಡಿಯಲ್ಲಿ 15 ಕೋಟಿಗೂ ಹೆಚ್ಚು ಗ್ರಾಮೀಣ ಮನೆಗಳಿಗೆ ನಲ್ಲಿನೀರು ತಲುಪಿರುವುದು, ಮಹಿಳೆಯರ ದಿನನಿತ್ಯದ ಶ್ರಮವನ್ನು ಕಡಿಮೆ ಮಾಡಿದೆ. ಶಿಕ್ಷಣದಲ್ಲಿ, ಬಾಲಕಿಯರ ದಾಖಲಾತಿ ಪ್ರಮಾಣ ಶೇಕಡ 75.5 ರಿಂದ ಶೇಕಡ 78 ರಷ್ಟಕ್ಕೆ ಏರಿಕೆಯಾಗಿದೆ. ಸುಕನ್ಯಾ ಸಮೃದ್ಧಿ ಯೋಜನೆ ಅಡಿಯಲ್ಲಿ 4.2 ಕೋಟಿ ಖಾತೆಗಳು ತೆರೆಯಲ್ಪಟ್ಟಿವೆ,

ಇದು ಬಾಲಕಿಯ ಆರ್ಥಿಕ ಭದ್ರತೆಗೆ ಪೂರಕವಾಗಿದೆ. ತ್ರಿಪಲ್ ತಲಾಖ್ ರದ್ದತಿ ಮಹತ್ವದ ಕಾನೂನು ಬದಲಾವಣೆಗಳಲ್ಲೊಂದಾಗಿದೆ. ಇದಕ್ಕೆ ಜೊತೆಗೆ, ನಾರಿ ಶಕ್ತಿ ವಂದನ ಅಧಿನಿಯಮದ ಮೂಲಕ ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇಕಡ 33 ರಷ್ಟು ಸ್ಥಾನ ಮೀಸಲಾತಿ ಒದಗಿಸಲಾಗಿದೆ. ಈ ದಶಕದ ಪಯಣ, ಮಹಿಳೆಯರನ್ನು ಬೆಂಬಲಿಸುವಷ್ಟರಲ್ಲೇ ಅಲ್ಲ, ಅವರನ್ನು ಮನೆ, ಶಾಲೆ, ಕಾರ್ಯಕ್ಷೇತ್ರ ಹಾಗೂ ಆಡಳಿತದ ಹಂತಗಳಲ್ಲಿ ಮುಂಚೂಣಿಗೆ ತರುವ ನೂತನ ಭಾರತ ನಿರ್ಮಾಣದ ಪ್ರಮುಖ ಮೈಲಿಗಲ್ಲಾಗಿದೆ.

**<><*<><>*><>**

ಭಾರತವನ್ನು ಜಗತ್ತಿನ ಆಹಾರ ಕೇಂದ್ರವಾಗಿ ರೂಪಿಸುವ ಮಹತ್ವಾಕಾಂಕ್ಷೆಯ ಗುರಿಯೊಂದಿಗೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳು, ಕೃಷಿ ವಿಶ್ವವಿದ್ಯಾನಿಲಯಗಳು, ಕೃಷಿ ವಿಜ್ಞಾನ ಕೇಂದ್ರಗಳು, ರೈತರು ಮತ್ತು ವಿಜ್ಞಾನಿಗಳ ಸಹಕಾರದೊಂದಿಗೆ ನಿರ್ದಿಷ್ಟ ಕಾರ್ಯಸೂಚಿ ಸಿದ್ಧಪಡಿಸುವುದಾಗಿ ಕೇಂದ್ರ ಕೃಷಿ ಸಚಿವ ಶ್ರೀ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ. ಬೆಂಗಳೂರಿನ ಐಸಿಎಆರ್–ಐಐಎಚ್‌ಆರ್ ಆವರಣದಲ್ಲಿ ಇಂದು ನಡೆದ 'ವಿಕಸಿತ ಕೃಷಿ ಸಂಕಲ್ಪ ಅಭಿಯಾನ' ಕಾರ್ಯಕ್ರಮದಲ್ಲಿ ರೈತರನ್ನು ಉದ್ದೇಶಿಸಿ ಮಾತನಾಡಿದ ಅವರು, ಭಾರತದಲ್ಲಿನ 145 ಕೋಟಿಗೂ ಹೆಚ್ಚು ಜನರನ್ನು ತೃಪ್ತಿಪಡಿಸುವ ಜೊತೆಗೆ ಜಗತ್ತಿನ ಆಹಾರ ಭದ್ರತೆಯಲ್ಲಿ ಭಾರತ ಪ್ರಮುಖ ಪಾತ್ರವಹಿಸಲಿದೆ ಎಂದರು. ಕಳೆದ ಹತ್ತು ದಿನಗಳಲ್ಲಿ, 1 ಸಾವಿರದ 896 ತಂಡಗಳು, ಸುಮಾರು 8 ಸಾವಿರದ 188 ಗ್ರಾಮಗಳಲ್ಲಿ 9 ಲಕ್ಷಕ್ಕೂ ಹೆಚ್ಚು ರೈತರ ಜೊತೆ ಸಂಪರ್ಕ ಸಾಧಿಸಿ ಮಾಹಿತಿ ನೀಡಿರುವುದು ಈ ಕಾರ್ಯಕ್ರಮದ ಯಶಸ್ಸಿಗೆ ಸಾಕ್ಷಿಯಾಗಿದೆ ಎಂದು ಸಚಿವರು ತಿಳಿಸಿದರು.

**<><*<><>*><>**

ತೀವ್ರ ಮಳೆಯಿಂದ ತೊಂದರೆಗೀಡಾಗಿದ್ದ ಅಸ್ಸಾಂನಲ್ಲಿ ಇಂದು ಪ್ರವಾಹ ಪರಿಸ್ಥಿತಿ ಸುಧಾರಿಸಿದೆ. ಇಂದು ಯಾವುದೇ ಭೂಕುಸಿತ, ಸಾವುಗಳು ವರದಿಯಾಗದಿದ್ದರೂ  ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಪ್ರಕಾರ, 130 ಪರಿಹಾರ ಶಿಬಿರಗಳಲ್ಲಿ 30 ಸಾವಿರಕ್ಕೂ ಹೆಚ್ಚು ಜನ ಆಶ್ರಯ ಪಡೆದಿದ್ದಾರೆ. 12 ಜಿಲ್ಲೆಗಳ ಸುಮಾರು 900 ಹಳ್ಳಿಗಳಲ್ಲಿ 3 ಲಕ್ಷಕ್ಕೂ ಹೆಚ್ಚು ಜನರು ಇನ್ನೂ ಪ್ರವಾಹದ ಸ್ಥಿತಿಗೆ ಸಿಲುಕಿದ್ದಾರೆ. ಬ್ರಹ್ಮಪುತ್ರ ಸೇರಿದಂತೆ ಪ್ರಮುಖ ನದಿಗಳ ಹರಿವು ತಗ್ಗಿದ್ದು, ಕೆಲವು ಸ್ಥಳಗಳಲ್ಲಿ ಇತರೆ ನದಿಗಳು ಅಪಾಯ ಮಟ್ಟ ಮೀರಿ ಹರಿಯುತ್ತಿವೆ. ಕಾಮರೂಪ ಜಿಲ್ಲೆಯಲ್ಲಿ ಪ್ರವಾಹ ಪರಿಸ್ಥಿತಿ ಸುಧಾರಿಸಿರುವ ಹಿನ್ನೆಲೆಯಲ್ಲಿ, ಗುವಾಹಟಿ ಮತ್ತು ಉತ್ತರ ಗುವಾಹಟಿಯ ನಡುವೆ ಬ್ರಹ್ಮಪುತ್ರ ನದಿಯಲ್ಲಿ ದೋಣಿ ಸೇವೆ ಪುನರಾರಂಭಗೊಂಡಿದೆ. ಏತನ್ಮಧ್ಯೆ, ಬರಾಕ್ ಕಣಿವೆಯ ಕ್ಯಾಚರ್, ಶ್ರೀಭೂಮಿ ಮತ್ತು ಹೈಲಕಂಡಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಸಾಮಾನ್ಯ ಮಳೆಯಾಗುವ ಸಾಧ್ಯತೆ ಹೆಚ್ಚು ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಇದುವರೆಗೆ ಅಸ್ಸಾಂನಲ್ಲಿ ಉಂಟಾದ ಮಳೆಯಿಂದ 23 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ.

**<><*<><>*><>**

ಉತ್ತರಖಂಡದ ಗರ್‌ವಾಲ್‌ದಲ್ಲಿನ ಮುಂಚೂಣಿ ಸೇನಾ ನೆಲೆಗಳಿಗೆ ಇಂದು ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಭೇಟಿ ನೀಡಿ, ಅಲ್ಲಿ ನಿಯೋಜಿಸಲಗಿರುವ  ಸೇನಾಪಡೆಗಳ ಕಾರ್ಯಚರಣೆ ಮತ್ತು ಆಡಳಿತ ಕಾರ್ಯಸಿದ್ಧತೆ ಕುರಿತು ಪರಿಶೀಲನೆ ನಡೆಸಿದರು.

**><*<><>*><>**

ನಾಸಾದ ಕೆನಡಿ ಬ್ಯಾಹ್ಯಾಕಾಶ ಕೇಂದ್ರದಿಂದ ಪ್ರತಿಷ್ಠಿತ ಎಕ್ಸಿಯಂ 4 ಯೋಜನೆಯನ್ನು ಇದೇ 10 ರಂದು ಉಡಾವಣೆ ಮಾಡಲು ಸಿದ್ಧತೆ ನಡೆಯುತ್ತಿದೆ. ಈ ಐತಿಹಾಸಿಕ ಯೋಜನೆಯಲ್ಲಿ ಭಾರತ ಸೇರಿದಂತೆ 4 ರಾಷ್ಟ್ರಗಳ ಗಗನ ಯಾತ್ರಿಕರನ್ನು ಅಂತಾರಾಷ್ಟ್ರೀಯ ಬ್ಯಾಹ್ಯಾಕಾಶ ನಿಲ್ದಾಣಕ್ಕೆ ಕಳುಹಿಸಲು ಯೋಜಿಸಲಾಗಿದ್ದು, ಭಾರತದ ಗಗನಯಾತ್ರಿ ಸುಧಾಂಶು ಶುಕ್ಲ ಇದರ ಭಾಗವಾಗಿದ್ದಾರೆ.

**<><*<><>*><>**

ಫ್ರೆಂಚ್ ಓಪನ್ ಟೆನ್ನಿಸ್ ಟೂರ್ನಿಯಲ್ಲಿ ಇಟಲಿಯ ಸಾರಾ ಎರ್ರಾನಿ ಮತ್ತು ಜಾಸ್ಮಿನ್ ಪಾವೋಲಿನಿ ಜೋಡಿ ಮಹಿಳಾ ಡಬಲ್ಸ್ ಪ್ರಶಸ್ತಿಯನ್ನು ಗೆದ್ದಿದೆ. ಇಂದು ನಡೆದ ಫೈನಲ್ ಪಂದ್ಯದಲ್ಲಿ ಇಟಲಿ ಜೋಡಿ ಕಜಕಿಸ್ತಾನ್ ಅನ್ನಾ ಡನಿಲಿನಾ ಮತ್ತು ಸರ್ಬಿಯಾದ ಅಲೆಕ್ಸಾಂಡ್ರಾ ಕ್ರುನಿಕ್ ಜೋಡಿಯನ್ನು 6–4, 2–6, 6–1 ಸೆಟ್‌ಗಳ ಅಂತರದಲ್ಲಿ ಮಣಿಸಿತು.

**<><*<><>*><>**